## ಕರ್ನಾಟಕ ಸರ್ಕಾರದ ನಡವಳಿಗಳು

ವಿಷಯ:- ಶ್ರೀ ರಾಜಶೇಖರಗೌಡ, ತಾಂತ್ರಿಕ ಸಹಾಯಕರು, ಅಧೀಕ್ಷಕ ಇಂಜಿನೀಯರ್ ರವರ ಕಛೇರಿ, ಪಂ.ರಾ.ಇಂ.ವೃತ್ತ ಮೈಸೂರು ಇವರ ಅಮಾನತ್ತುಗೊಳಿಸುವ ಬಗ್ಗೆ- ಆದೇಶ.

ಓದಲಾಗಿದೆ.

ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ, ಜಿಲ್ಲಾ ಪಂಚಾಯತ್, ಮೈಸೂರು ರವರ ಅ.ಸ.ಪತ್ರ ಸಂಖ್ಯೆ. ಜಿಪಮೈ/ಮುಕಾನಿಅ.ಆಶಾ /ಇತರೆ/2011-12, ದಿನಾಂಕ. 04-11-2001

ಪ್ರಸ್ತಾವನೆ:-

ಮೇಲೆ (1)ರಲ್ಲಿ ಓದಲಾದ ದಿನಾಂಕ:04.11.2011ರ ಪತ್ರದಲ್ಲಿ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ, ಜಿಲ್ಲಾ ಪಂಚಾಯತ್, ಮೈಸೂರು ಇವರು ಮೈಸೂರು ಜಿಲ್ಲೆಯ ಕುಡಿಯುವ ನೀರಿನ ಯೋಜನೆಯ ಅನುಷ್ಠಾನದಲ್ಲಿ ವಿಳಂಬವಾಗುತ್ತಿರುವ ಬಗ್ಗೆ ಚರ್ಚಿಸಲು ದಿನಾಂಕ. 4-11-2011ರಂದು ಪಂಚಾಯತ್ ರಾಜ್ ಇಂಜಿಯರಿಂಗ್ ವಿಭಾಗದ ಇಂಜಿನಿಯರ್‌ಗಳ ಮತ್ತು ಗುತ್ತಿಗೆದಾರರ ಸಭೆಯನ್ನು ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿರವರ ಅದ್ಯಕ್ಷತೆಯಲ್ಲಿ ಕರೆದಿದ್ದ ಬಗ್ಗೆ ತಿಳಿಸಿ, ಸದರಿ ಸಭೆಯಲ್ಲಿ ಯೋಜನೆಯ ಅನುಷ್ಠಾನದಲ್ಲಿ ಆಗುತ್ತಿರುವ ವಿಳಂಬಗಳಿಗೆ ಕಾರಣಗಳನ್ನು ಕೇಳಿದಾಗ ತುಂಡು ಗುತ್ತಿಗೆಗೆ ಸಂಬಂಧಿಸಿದಂತೆ ಒಂದು ಲಕ್ಷ ರೂಪಯಿಗಳಿಗೆ ಮೀರಿದ ಕರಾರು ಪತ್ರಗಳಿಗೆ ಒಪ್ಪಿಗೆ ಸಹಿಯನ್ನು ಪಂಚಾಯತ್ ರಾಜ್ ಇಂಜಿಯರಿಂಗ್ ವೃತ್ತ, ಮೈಸೂರು ಇಲ್ಲಿಂದ ನಿಯಮಾನುಸಾರ ಪಡೆಯಬೇಕಾಗಿದ್ದು, ಸದರಿ ವೃತ್ತದಲ್ಲಿ ತಾಂತ್ರಿಕ ಸಹಾಯಕರಾಗಿ ಕಾರ್ಯನಿರ್ವಹಿಸುತ್ತಿರುವ ಶ್ರೀ ರಾಜಶೇಖರಗೌಡ ಇವರು ಕರಾರು ಪತ್ರಗಳಿಗೆ ಒಪ್ಪಿಗೆಯ ಸಹಿಯನ್ನು ಮಾಡಿಸುವಲ್ಲಿ ಅನಗತ್ಯ ವಿಳಂಬ ಮಾಡುತ್ತಿದ್ದಾರೆಂದು ಗುತ್ತಿಗೆದಾರರು ಒಕ್ಕೊರಲಿನಿಂದ ದೂರಿರುವ ಬಗ್ಗೆ ವರದಿ ಮಾಡಿರುತ್ತಾರೆ. ಈ ಪ್ರಕರಣವಲ್ಲದೆ, ಪ್ರತಿ ಬಾರಿಯು ಅನುಮೋದನೆ ಪಡೆಯುವಾಗಲೂ ಈ ಅಧಿಕಾರಿಯು ಬಹಳ ತೊಂದರೆ ಮಾಡುತ್ತಿರುತ್ತಾರೆಂದು ದೂರಿರುವ ಬಗ್ಗೆಯೂ ಸಹ ಉಲ್ಲೇಖಿತ ಪತ್ರದಲ್ಲಿ ತಿಳಿಸಿರುತ್ತಾರೆ.

ಕೆ.ಆರ್.ನಗರ ಪ್ರಂಚಾಯತ್ ರಾಜ್ ಇಂಜಿನಿಯರಿಂಗ್ ವಿಭಾಗದಲ್ಲಿ ಕುಡಿಯುವ ನೀರಿನ ಯೋಜನೆಗೆ ಸಂಬಂದಿಸಿದಂತೆ ಇ-ಪ್ರೊಕ್ಯೂರ್‌ಮೆಂಟ್ ಮೂಲಕ ಟೆಂಡರ್ ಕರೆಯಲು ಕಾರ್ಯಪಾಲಕ ಇಂಜಿನಿಯರ್ ಇವರು ಸುಮಾರು 62 ಟೆಂಡರ್ ಪ್ರಕ್ರಿಯೆ ಪ್ರಸ್ತಾವನೆಗಳಿಗೆ ಸಂಬಂದಿಸಿದಂತೆ ಡ್ರಾಫ್ಟ್ ಟೆಂಡರ್ ಶೆಡ್ಯೂಲ್‌ಅನ್ನು ಪಂಚಾಯತ್ ರಾಜ್ ಇಂಜಿನಿಯರಿಂಗ್ ವೃತ್ತ ಮೈಸೂರು ಇಲ್ಲಿಗೆ ಅನುಮೋದನೆಗೆ ಸಲ್ಲಿಸಿದ್ದು, ಇದುವರೆವಿಗೂ ಸದರಿ ಕಛೇರಿಯಲ್ಲಿ ಅನುಮೋದನೆ ದೊರೆಯದೆ ಬಾಕಿ ಇರುವ ಬಗ್ಗೆ; ಮೈಸೂರು ವಿಭಾಗಕ್ಕೆ ಸಂಬಂಧಿಸಿದಂತೆ ಕುಡಿಯುವ ನೀರಿನ ಯೋಜನೆಗಾಗಿ ಸುಮಾರು 75 ತುಂಡು ಗುತ್ತಿಗೆ ಕರಾರು ಪತ್ರಗಳು ಸದರಿ ಕಛೇರಿಯಲ್ಲಿ ಸಹಿಯಾಗದೆ ಬಾಕಿ ಉಳಿದಿರುವ ಬಗ್ಗೆ ವರದಿ ಮಾಡುತ್ತಾ ಸಂಬಂಧಿಸಿದ ಇಂಜಿನಿಯರ್‌ಗಳು ತಮ್ಮ ಕರ್ತವ್ಯಗಳನ್ನು ನಿರ್ವಹಿಸುವುದನ್ನು ಕೈಬಿಟ್ಟು ಪ್ರತಿದಿನ ಅನುಮೋದನೆ ಪಡೆಯಲು ವೃತ್ತ ಕಛೇರಿಗೆ ಅಲೆಯುವ ಪರಿಸ್ಥಿತಿ ಉದ್ಭವಾಗಿರುತ್ತದೆ ಎಂದು ಸಭೆಯಲ್ಲಿ ಹಾಜರಿದ್ದ ಇಂಜಿನಿಯರ್‌ಗಳು ತಿಳಿಸಿರುವ ಬಗ್ಗೆ ವರದಿ ಮಾಡಿದ್ದಾರೆ. ಈ ಎಲ್ಲಾ ತೊಂದರೆಗಳಿಗೆ ಶ್ರೀ ರಾಜಶೇಖರ್‌ಗೌಡ, ತಾಂತ್ರಿಕ ಸಹಾಯಕರು, ಪಂಚಾಯತ್ ರಾಜ್ ಇಂಜಿನಿಯರಿಂಗ್ ವೃತ್ತ, ಮೈಸೂರು ಇವರು ಮೇಲಿನ ಎಲ್ಲಾ ಪ್ರಸ್ತಾವನೆಗಳು ಬಾಕಿ ಉಳಿದಿರುವುದಕ್ಕೆ

--2

19/11/2011

ಕಾರಣರಾಗಿದ್ದಾರೆಂದು ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ, ಜಿಲ್ಲಾ ಪಂಚಾಯತ್, ಮೈಸೂರು ಇವರು ದಿನಾಂಕ:04-11-2011ರಂದು ಕರೆದಿದ್ದ ಸಭೆಗೆ ಹಾಜರಾಗಿದ್ದ ಇಂಜಿನಿಯರ್ ಗಳು ಹಾಗೂ ಗುತ್ತಿಗೆದಾರರುಗಳು ದೂರು ನೀಡಿರುವ ಬಗ್ಗೆ ಮೇಲೆ ಓದಲಾದ ವರದಿಯಲ್ಲಿ ತಿಳಿಸಲಾಗಿದೆ.

ಮುಂದುವರೆದು, ಈ ಬಗ್ಗೆ ಚರ್ಚಿಸಿ ಸಮಜಾಯಿಸಿ ಪಡೆಯುವ ಸಲುವಾಗಿ ಸದರಿ ಅಧಿಕಾರಿಯನ್ನು ಸಭೆಗೆ ಹಾಜರಾಗುವಂತೆ ದೂರವಾಣಿ ಮೂಲಕ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿರವರು ಸಂಪರ್ಕಿಸಿ ತಿಳಿಸಿದ್ದರೂ ಸಹ ಅವರು ಆಸ್ಪತ್ರೆಯಲ್ಲಿರುವುದಾಗಿ ತಿಳಿಸಿ, ಮರು ಉತ್ತರಕ್ಕೆ ಕಾಯದೆ ತಟ್ಟನೆ ದೂರವಾಣಿ ಸಂಪರ್ಕವನ್ನು ಕಡಿತಗೊಳಿಸಿರುತ್ತಾರೆಂದು ಅಲ್ಲದೆ ಪುನ: ಅವರನ್ನು ಸಂಪರ್ಕಿಸಲು ಪ್ರಯತ್ನಿಸಲಾಗಿ ದೂರವಾಣಿ ಕರೆಗೆ ಪ್ರತಿಕ್ರಿಯಿಸಿರುವುದಿಲ್ಲ. ಇವರ ನಡವಳಿಕೆಯನ್ನು ಗಮನಿಸಿದರೆ ಇವರು ಉದ್ದೇಶಪೂರ್ವಕವಾಗಿ ಈ ರೀತಿ ನಡೆದುಕೊಂಡಿರುವುದು ಮೇಲ್ನೋಟಕ್ಕೆ ಕಂಡು ಬಂದಿದ್ದು ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿರವರ ಆದೇಶಕ್ಕೆ ಅಗೌರವ ತೋರಿರುವುದಲ್ಲದೆ, ಸದರಿ ಸಭೆಯಲ್ಲಿ ಇವರ ಹಾಜರಾತಿ ಅವಶ್ಯವಿದ್ದರೂ ಸಹ ಇವರ ಅಸಹಕಾರದಿಂದಾಗಿ ಸಮಸ್ಯೆ ಇತ್ಯರ್ಥಕ್ಕೆ ಅವಕಾಶವಾಗಿರುವುದಿಲ್ಲ. ಈ ಬಗ್ಗೆ ದೂರವಾಣಿ ಮೂಲಕ ಅಧೀಕ್ಷಕ ಅಭಿಯಂತರರು ಮತ್ತು ಮುಖ್ಯ ಇಂಜಿನಿಯರ್ ಇಬ್ಬರಿಗೂ ಸಹ ಮಾಹಿತಿ ನೀಡಿದ್ದು ಸದರಿ ಅಧಿಕಾರಯು ತಮ್ಮ ಜವಾಬ್ದಾರಿಯನ್ನು ಅರಿಯದೆ ನಿರ್ಲಕ್ಷ್ಯತನ ತೋರಿರುವುದಲ್ಲದೆ ಮೇಲಾಧಿಕಾರಿಗಳ ಆದೇಶಕ್ಕೆ ಅಗೌರವ ತೋರಿರುವ ಅವರ ನಡುವಳಿಕೆಯ ಬಗ್ಗೆ ವಿವರಿಸಿದ್ದು ಅಧೀಕ್ಷಕ ಅಭಿಯಂತರರು ಸದರಿ ಅಧಿಕಾರಿಯನ್ನು ಕೂಡಲೇ ಜಿಲ್ಲಾ ಪಂಚಾಯತ್ ಕಛೇರಿಗೆ ಕಳುಹಿಸುವುದಾಗಿ ತಿಳಿಸಿದ್ದು, ಆದರೆ ಸದರಿ ಅಧಿಕಾರಿಯು ಜಿಲ್ಲಾ ಪಂಚಾಯತ್ ಕಛೇರಿಗೆ ಹಾಜರಾಗಿ ಕುಡಿಯುವ ನೀರಿನ ಸಭೆಗೆ ಹಾಜರಾಗಿರುವುದಿಲ್ಲ.

ಇವರ ಈ ರೀತಿಯ ಬೇಜವಾಬ್ದಾರಿತನ, ಕರ್ತವ್ಯ ನಿರ್ಲಕ್ಷ್ಯತನದಿಂದಾಗಿ ಮೈಸೂರು ಜಿಲ್ಲೆಯ ಕುಡಿಯುವ ನೀರಿನ ಯೋಜನೆಗಳಿಗೆ ನಿಗದಿತ ಅವಧಿಯಲ್ಲಿ ಅನುಮೋದನೆ ದೊರೆಯದೆ ಅನಗತ್ಯ ವಿಳಂಬವಾಗುತ್ತಿದ್ದು ಪ್ರಗತಿ ಸಾಧನೆಯಲ್ಲಿ ಮೈಸೂರು ಜಿಲ್ಲೆಯು ಹಿಂದುಳಿದಿರುತ್ತದೆಂದು ತಿಳಿಸುತ್ತಾ, ಶ್ರೀ ರಾಜಶೇಖರ್‌ಗೌಡ, ತಾಂತ್ರಿಕ ಸಹಾಯಕರು, ಪಂಚಾಯತ್ ರಾಜ್ ಇಂಜಿನಿಯರಿಂಗ್ ವೃತ್ತ, ಮೈಸೂರು ಇವರ . ದುರ್ನಡತೆ, ಅಶಿಸ್ತು, ಮೇಲಾಧಿಕಾರಿಗಳ ಆದೇಶದ ಉಲ್ಲಂಘನೆ, ಬೇಜವಬ್ದಾರಿತನ, ಕರ್ತವ್ಯ ನಿರ್ಲಕ್ಷತೆ ಈ ಎಲ್ಲಾ ಆರೋಪಗಳಿಗಾಗಿ ಇವರನ್ನು ಕೂಡಲೆ ಇಲಾಖಾ ವಿಚಾರಣೆ ಕಾಯ್ದಿರಿಸಿ, ಅಮಾನತ್ತಿನಲ್ಲಿ ಇಡುವಂತೆ ಕೋರಿರುತ್ತಾರೆ.

ಪ್ರಸ್ತಾವನೆಯನ್ನು ಸರ್ಕಾರವು ಕೂಲಂಕಷವಾಗಿ ಪರಿಶೀಲಿಸಿದೆ. ಶ್ರೀ ರಾಜಶೇಖರ ಗೌಡ, ತಾಂತ್ರಿಕ ಸಹಾಯಕರು, ಅಧೀಕ್ಷಕ ಅಭಿಯಂತರರ ಕಛೇರಿ, ಪಂಚಾಯತ್ ರಾಜ್ ಇಂಜಿಯರಿಂಗ್ ವೃತ್ತ, ಮೈಸೂರು ಇವರು ಮೈಸೂರು ಜಿಲ್ಲೆಯ ಕುಡಿಯುವ ನೀರಿನ ಯೋಜನೆಯ ಅನುಷ್ಠಾನದಲ್ಲಿ ಅನಗತ್ಯ ವಿಳಂಬಕ್ಕೆ ಕಾರಣರಾಗಿದ್ದು, ದುರ್ನಡತೆ, ಅಶಿಸ್ತು, ಮೇಲಾಧಿಕಾರಿಗಳ ಆದೇಶಗಳ ಉಲ್ಲಂಘನೆ, ಬೇಜವಾಬ್ದಾರಿತನ ಮತ್ತು ಕರ್ತವ್ಯ ನಿರ್ಲಕ್ಷತೆ ತೋರಿರುವುದು ಮೇಲ್ನೋಟಕ್ಕೆ ಕಂಡುಬಂದಿರುವ ಹಿನ್ನೆಲೆಯಲ್ಲಿ ಇವರನ್ನು ಸೇವೆಯಿಂದ ಅಮಾನತ್ತುಗೊಳಿಸಲು ಸರ್ಕಾರವು ತೀರ್ಮಾನಿಸಿರುತ್ತದೆ. ಆದ್ದರಿಂದ ಈ ಕೆಳಕಂಡ ಆದೇಶ.

**<u>ಆದೇಶ ಸಂಖ್ಯೆ.ಗ್ರಾಅಪ 39 ಇಎನ್‌ಕ್ಯೂ 2011, ಬೆಂಗಳೂರು ದಿನಾಂಕ. 19-11-2011</u>**

ಪ್ರಸ್ತಾವನೆಯಲ್ಲಿ ವಿವರಿಸಿರುವ ಅಂಶಗಳ ಹಿನ್ನೆಲೆಯಲ್ಲಿ, ಶ್ರೀ ರಾಜಶೇಖರ ಗೌಡ, ತಾಂತ್ರಿಕ ಸಹಾಯಕರು, ಅಧೀಕ್ಷಕ ಅಭಿಯಂತರರವರ ಕಛೇರಿ, ಪಂಚಾಯತ್ ರಾಜ್ ಇಂಜಿಯರಿಂಗ್ ವೃತ್ತ, ಮೈಸೂರು ಇವರು ಮೈಸೂರು ಜಿಲ್ಲೆಯ ಕುಡಿಯುವ ನೀರಿನ ಯೋಜನೆಯ ಅನುಷ್ಠಾನದಲ್ಲಿ

--3

19/11/2011

ಅನಗತ್ಯ ವಿಳಂಬಕ್ಕೆ ಕಾರಣರಾಗಿದ್ದು, ದುರ್ನಡತೆ, ಅಶಿಸ್ತು, ಮೇಲಾಧಿಕಾರಿಗಳ ಆದೇಶಗಳ ಉಲ್ಲಂಘನೆ, ಬೇಜವಾಬ್ದಾರಿತನ ಮತ್ತು ಕರ್ತವ್ಯ ನಿರ್ಲಕ್ಷತೆ ತೋರಿರುವ ಕರ್ತವ್ಯ ಲೋಪ ಮೇಲ್ನೋಟಕ್ಕೆ ಕಂಡುಬಂದಿರುವ ಹಿನ್ನೆಲೆಯಲ್ಲಿ ಇವರ ವಿರುದ್ಧ ಇಲಾಖಾ ವಿಚಾರಣೆ ಬಾಕಿ ಇಟ್ಟು ಕರ್ನಾಟಕ ನಾಗರೀಕ ಸೇವಾ (ವರ್ಗೀಕರಣ, ನಿಯಂತ್ರಣ ಮತ್ತು ಮೇಲ್ಮನವಿ) ನಿಯಮಗಳು 1957ರ ನಿಯಮ 10 (1) (ಡಿ) ರನ್ವಯ ಇವರನ್ನು ತಕ್ಷಣದಿಂದ ಜಾರಿಗೆ ಬರುವಂತೆ ಸೇವೆಯಿಂದ ಅಮಾನತ್ತುಗೊಳಿಸಿದೆ ಹಾಗೂ ಅವರ ಹುದ್ದೆಯ ಸ್ಥಾನವನ್ನು (ಲೀನ್) ಮುಖ್ಯ ಇಂಜಿನಿಯರ್, ಪಂಚಾಯತ್ ರಾಜ್ ಇಂಜಿನಿಯರಿಂಗ್ ಇಲಾಖೆ, ಬೆಂಗಳೂರು ಇವರ ಕಛೇರಿಗೆ ವರ್ಗಾಯಿಸಿದೆ.

ಅಮಾನತ್ತು ಅವಧಿಯಲ್ಲಿ ಸಕ್ಷಮ ಪ್ರಾಧಿಕಾರದ ಅನುಮತಿಯಿಲ್ಲದೇ ಅವರು ಕೇಂದ್ರಸ್ಥಾನವನ್ನು ಬಿಡತಕ್ಕದ್ದಲ್ಲ ಹಾಗೂ ಕರ್ನಾಟಕ ನಾಗರೀಕ ಸೇವಾ ನಿಯಮಾವಳಿಗಳು 1958ರ ನಿಯಮ 98ರ ಅನುಸಾರ ಜೀವನಾಧಾರ ಭತ್ಯೆಗೆ ಇವರು ಅರ್ಹರಿರುತ್ತಾರೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ
ಮತ್ತು ಅವರ ಹೆಸರಿನಲ್ಲಿ

19/11/2011
(ಡಿ.ಆರ್.ಶಿವಾನಂದಮೂರ್ತಿ)
ಸರ್ಕಾರದ ಅಧೀನ ಕಾರ್ಯದರ್ಶಿ(ಪ್ರಭಾರ),
ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ.

ಇವರಿಗೆ:

1. ಮಹಾಲೇಖಪಾಲರು, ಕರ್ನಾಟಕ, ಬೆಂಗಳೂರು (ಲೆಕ್ಕ ಪತ್ರ 1 & 2) / (ಆಡಿಟ್)
2. ಸರ್ಕಾರದ ಪ್ರಧಾನ ಕಾರ್ಯದರ್ಶಿ/ ಕಾರ್ಯದರ್ಶಿ, ಲೋಕೋಪಯೋಗಿ ಇಲಾಖೆ.
3. ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ, ಜಿಲ್ಲಾ ಪಂಚಾಯತ್, ಮೈಸೂರು.
4. ಮುಖ್ಯ ಇಂಜಿನಿಯರ್, ಪಂಚಾಯತ್ ರಾಜ್ ಇಂಜಿನಿಯರಿಂಗ್ ಇಲಾಖೆ, ರಿಸಾಲ್ದಾರ್ ರಸ್ತೆ, ಶೇಷಾದ್ರಿಪುರಂ, ಬೆಂಗಳೂರು,
5. ಮುಖ್ಯ ಕಾರ್ಯಾಚರಣೆ ಅಧಿಕಾರಿ, ಕೆ.ಆರ್.ಆರ್.ಡಿ.ಎ., ರಾಜಕುಮಾರ್ ರಸ್ತೆ, ರಾಜಾಜಿನಗರ 1ನೇ ಬ್ಲಾಕ್, ಬೆಂಗಳೂರು.
6. ಮುಖ್ಯ ಇಂಜಿನಿಯರ್, ಸಂಪರ್ಕ ಮತ್ತು ಕಟ್ಟಡಗಳು (ದಕ್ಷಿಣ), ಕೆ.ಆರ್.ಸರ್ಕಲ್, ಬೆಂಗಳೂರು.
7. ಅಧೀಕ್ಷಕ ಇಂಜಿನಿಯರ್, ಪಂಚಾಯತ್ ರಾಜ್ ಇಂಜಿನಿಯರಿಂಗ್ ವೃತ್ತ, ಮೈಸೂರು.
8. ಶ್ರೀ ರಾಜಶೇಖರ ಗೌಡ, ತಾಂತ್ರಿಕ ಸಹಾಯಕರು, ಅಧೀಕ್ಷಕ ಅಭಿಯಂತರರವರ ಕಛೇರಿ, ಪಂ.ರಾ.ಇಂ.ವೃತ್ತ, ಮೈಸೂರು
9. ಸರ್ಕಾರದ ಅಧೀನ ಕಾರ್ಯದರ್ಶಿ, ಲೋಕೋಪಯೋಗಿ ಇಲಾಖೆ, (ಸೇವೆಗಳು-ಎ) / (ಸೇವೆಗಳು-ಸಿ)
10. ಗ್ರಾ.ಅ.ಪಂ.ರಾಜ್ ಸಚಿವರ ಆಪ್ತ ಕಾರ್ಯದರ್ಶಿಯವರಿಗೆ.
11. ಗ್ರಾ.ಅ.ಪಂ.ಇಲಾಖೆಯ ಸರ್ಕಾರದ ಪ್ರಧಾನ ಕಾರ್ಯದರ್ಶಿ / ಕಾರ್ಯದರ್ಶಿ/ ಉಪ ಕಾರ್ಯದರ್ಶಿ ಇವರುಗಳ ಆಪ್ತ ಕಾರ್ಯದರ್ಶಿ / ಆಪ್ತ ಸಹಾಯಕರಿಗೆ.
12. ಮೇಲ್ವಿಚಾರಕರು, ಗಣಕಯಂತ್ರ ಕೇಂದ್ರ ಗ್ರಾ.ಅ.ಪಂ.ರಾಜ್ ಇಲಾಖೆ ಇವರಿಗೆ ವೆಬ್‌ಸೈಟ್‌ನಲ್ಲಿ ಪ್ರಕಟಿಸಲು ಕಳುಹಿಸಿದೆ.
13. ರಕ್ಷಾ ಕಡತ / ಮಾಹಿತಿ ಕೇಂದ್ರ/ ಹೆಚ್ಚುವರಿ ಪ್ರತಿಗಳು.